ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಅಗು ನೀ ಅನಿಕೇತನ
BE BOUNDLESS

DR. MANMOHAN SINGH
BENGALURU CITY UNIVERSITY

ಕುಲಸಚಿವರ (ಆಡಳಿತ) ಕಚೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001
ದೂ.ಸಂ.: 080-22961016/22131385 ಇ-ಮೇಲ್ ಐಡಿ: registrar@bcu.ac.in / registrarbcu@gmail.com

**ಸಂ:** ಡಾ.ಮಸಿಂಬೆಂನವಿ/ಶೈಕ್ಷಣಿಕ/ಸಂಯೋಜನೆ-2027-28/2026-27 **ದಿನಾಂಕ:** 17.10.2026

# ಅಧಿಸೂಚನೆ

**ವಿಷಯ:** 2027-28ನೇ ಶೈಕ್ಷಣಿಕ ಸಾಲಿಗೆ ಮಹಾವಿದ್ಯಾಲಯ ಮತ್ತು ಸಂಸ್ಥೆಗಳಿಂದ ವಿವಿಧ ಪ್ರಕಾರಗಳ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:**1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2024, ದಿನಾಂಕ: 23.10.2025.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 212 ಯುಎನ್ಇ 2024 (ಭಾಗ-1), ದಿನಾಂಕ: 06.10.2026.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020, ದಿನಾಂಕ: 18.02.2022.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್ಇ 2020, ದಿನಾಂಕ: 24.08.2020.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023, ದಿನಾಂಕ: 08.05.2024.
6. ಯು.ಜಿ.ಸಿ. (ವಿಶ್ವವಿದ್ಯಾಲಯಗಳಿಂದ ಕಾಲೇಜುಗಳ ಸಂಯೋಜನೆ) ನಿಯಮಗಳು 2009 ಮತ್ತು ತಿದ್ದುಪಡಿಗಳು.
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.10.2026

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2015ರ ಪ್ರಕಾರ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ನಿಗದಿಪಡಿಸಿದ ಬೆಂಗಳೂರು ನಗರ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಾದ **ಬಸವನಗುಡಿ, ಬಿ.ಟಿ.ಎಂ. ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟೆ, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ ಮತ್ತು ಯಲಹಂಕ** ವ್ಯಾಪ್ತಿಯಲ್ಲಿರುವ ಸಂಯೋಜಿತ ಕಾಲೇಜುಗಳಿಂದ ಹಾಗೂ ಹೊಸ ಶಿಕ್ಷಣ ಸಂಸ್ಥೆಗಳಿಂದ 2027-28ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59 ಮತ್ತು 62ರ ಅನ್ವಯ ವಿಶ್ವವಿದ್ಯಾಲಯದ ವಿವಿಧ ಪ್ರಕಾರಗಳ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2024 ದಿನಾಂಕ: 23.10.2025, ಸರ್ಕಾರದ ಪತ್ರ ದಿನಾಂಕ: 06.10.2026 ಹಾಗೂ ಯು.ಜಿ.ಸಿ ನಿಯಮಾವಳಿಗಳ ಮಾನದಂಡಗಳ ಅನ್ವಯ **UUCMS Portal (https://uucms.karnataka.gov.in/)** ಮೂಲಕ ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸತಕ್ಕದ್ದು.

*1. ಪ್ರಮುಖ ದಿನಾಂಕಗಳು (Calendar of Events):*

- UUCMS ತಂತ್ರಾಂಶದ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ: **26.10.2026**
- ದಂಡ ಶುಲ್ಕವಿಲ್ಲದೆ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **21.11.2026**
- ಆನ್‌ಲೈನ್ ಅರ್ಜಿಯ ದೃಢೀಕೃತ 3 ಪ್ರತಿಗಳನ್ನು ಅಗತ್ಯ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ: **25.11.2026**

*2. ಕಡ್ಡಾಯ ಮಾನದಂಡಗಳು (Compulsory Norms):*

1. **ಭೂಮಿಯ ವಿಸ್ತೀರ್ಣ (Requirement of Land):** ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020 ದಿನಾಂಕ: 18.02.2022ರ ಪ್ರಕಾರ ಸಂಸ್ಥೆಗಳು ಯಾವುದೇ ತಕರಾರಿಲ್ಲದ ಸ್ವಂತ/ಭೋಗ್ಯದ ಜಮೀನನ್ನು ಹೊಂದಿರತಕ್ಕದ್ದು:
   - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ (GBA Limits): ಕನಿಷ್ಠ **0.5 ಎಕರೆ**.
   - ಬಿ.ಎಂ.ಆರ್.ಡಿ.ಎ (BMRDA) / ನಗರ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ: ಕನಿಷ್ಠ **1.0 ಎಕರೆ**. (ಯುಜಿಸಿ ನಿಯಮಾವಳಿ 2009ಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿದ್ದು ಯಾವುದೇ ಹೆಚ್ಚುವರಿ ಕೋರ್ಸ್/ಸೀಟು ಹೆಚ್ಚಳ ಬಯಸದ ಹಳೆಯ ಕಾಲೇಜುಗಳಿಗೆ ಮಾತ್ರ ಈ ಷರತ್ತಿನಿಂದ ವಿನಾಯಿತಿ ಇರುತ್ತದೆ).

2. **ಶಾಸನಬದ್ಧ ಮಂಡಳಿಗಳ ಅನುಮೋದನೆ (AICTE / NCTE / RCI Approvals):**

a) **AICTE:** ಬಿ.ಬಿ.ಎ, ಬಿ.ಸಿ.ಎ, ಬಿ.ಹೆಚ್.ಎಂ, ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸ್‌ಗಳನ್ನು ನಡೆಸುತ್ತಿರುವ ಕಾಲೇಜುಗಳು AICTE ಪೂರ್ವಾನುಮೋದನೆ / ಅರ್ಜಿ ಸಲ್ಲಿಸಿದ ಸ್ವೀಕೃತಿ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

b) **NCTE:** ಬಿ.ಎಡ್, ಎಂ.ಎಡ್, ಬಿ.ಪಿ.ಎಡ್, ಎಂ.ಪಿ.ಎಡ್ ಹಾಗೂ ಇಂಟಿಗ್ರೇಟೆಡ್ ಬಿ.ಎ-ಬಿ.ಎಡ್ / ಬಿ.ಎಸ್ಸಿ-ಬಿ.ಎಡ್ ನಡೆಸುವ ಶಿಕ್ಷಣ ಸಂಸ್ಥೆಗಳು NCTE ಮಾನ್ಯತಾ ಆದೇಶವನ್ನು ಹೊಂದಿರಬೇಕು.

c) **RCI:** BASLP / MASLP ಕೋರ್ಸ್‌ಗಳಿಗೆ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ ಅನುಮೋದನೆ ಕಡ್ಡಾಯವಾಗಿರುತ್ತದೆ.

d) **ನ್ಯಾಕ್ (NAAC) ಮಾನ್ಯತೆ:** 5 ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ಕನಿಷ್ಠ 'C' ದರ್ಜೆಯ NAAC ಮಾನ್ಯತೆಯನ್ನು ಪಡೆದಿರತಕ್ಕದ್ದು.

3. **ಚಾಲ್ತಿಯಲ್ಲಿರುವ ಕಟ್ಟಡ ಸುರಕ್ಷತಾ ಪ್ರಮಾಣಪತ್ರ (Valid Building Safety Certificate):** ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್‌ಇ 2020 ದಿನಾಂಕ: 24.08.2020ರ ಅನ್ವಯ, ರಾಷ್ಟ್ರೀಯ ಕಟ್ಟಡ ಸಂಹಿತೆ (National Building Code - NBC) ನಿಯಮಗಳ ಪ್ರಕಾರ ಲೋಕೋಪಯೋಗಿ ಇಲಾಖೆ (PWD) ಯಿಂದ ಪಡೆದ ಚಾಲ್ತಿಯಲ್ಲಿರುವ ಕಟ್ಟಡ ಸುರಕ್ಷತೆ ಹಾಗೂ ರಚನಾತ್ಮಕ ಸ್ಥಿರತೆಯ ಪ್ರಮಾಣಪತ್ರವನ್ನು (Structural Stability Certificate) ಕಡ್ಡಾಯವಾಗಿ ಹೊಂದಿರತಕ್ಕದ್ದು.

4. **ಚಾಲ್ತಿಯಲ್ಲಿರುವ ಅಗ್ನಿ ಸುರಕ್ಷತಾ ಪ್ರಮಾಣಪತ್ರ (Valid Fire Safety Certificate):** ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ (Karnataka Fire and Emergency Services Department) ಕಾಲೇಜು ಕಟ್ಟಡಕ್ಕೆ ಪಡೆದ ಚಾಲ್ತಿಯಲ್ಲಿರುವ ಅಗ್ನಿ ಸುರಕ್ಷತಾ ಕ್ಲಿಯರೆನ್ಸ್ / ಅನುಸರಣಾ ಪ್ರಮಾಣಪತ್ರವನ್ನು (Fire Safety Compliance / Clearance Certificate) ಕಡ್ಡಾಯವಾಗಿ ಹೊಂದಿರತಕ್ಕದ್ದು.

*3. ಕಡ್ಡಾಯ ದಾಖಲೆಗಳು ಹಾಗೂ ಮುದ್ರಿತ ಪ್ರತಿಗಳ ಸಲ್ಲಿಕೆ ವಿಧಾನ:*

UUCMS ಪೋರ್ಟಲ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ಯಶಸ್ವಿಯಾಗಿ ಸಲ್ಲಿಸಿದ ನಂತರ, ಕಾಲೇಜುಗಳು **3 ಮುದ್ರಿತ ಪ್ರತಿಗಳನ್ನು (3 Hard Copies of Application)** ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

ಇದರ ಜೊತೆಗೆ, ಆಡಳಿತಾತ್ಮಕ ಮತ್ತು ಕಡತ ಪರಿಶೀಲನಾ ಉದ್ದೇಶಕ್ಕಾಗಿ ಕಾಲೇಜಿನ ಅಧಿಕೃತ ಲೆಟರ್‌ಹೆಡ್‌ನಲ್ಲಿ ಪ್ರತ್ಯೇಕವಾಗಿ ಮುಖಪುಟ ಪತ್ರವನ್ನು (**Covering Letter Separately**) ಲಗತ್ತಿಸಿ, ಕೆಳಕಂಡ ಕಡ್ಡಾಯ ದಾಖಲೆಗಳ **ಪ್ರತ್ಯೇಕ 1 ಸೆಟ್ ಪ್ರತಿಯನ್ನು (1 Set Copy)** ಕಡ್ಡಾಯವಾಗಿ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು:

1. **UUCMS ಸಂಯೋಜನಾ ಅರ್ಜಿಯ ಪ್ರತಿ (Affiliation UUCMS Application Copy)**.
2. **UUCMS ಮೂಲಕ ಪಾವತಿಸಿದ ಸಂಯೋಜನಾ ಶುಲ್ಕದ ರಸೀದಿ ಪ್ರತಿ (Affiliation Fee Payment Receipt Copy)**.
3. **ಭೂ ದಾಖಲೆಗಳು (Land Documents in the name of College or Society/Trust):** ಕಾಲೇಜು ಅಥವಾ ಸೊಸೈಟಿ/ಟ್ರಸ್ಟ್ ಹೆಸರಿನಲ್ಲಿರುವ ಚಾಲ್ತಿಯಲ್ಲಿರುವ ಖಾತಾ ಪ್ರತಿ, ಪಹಣಿ/RTC, ನೋಂದಾಯಿತ ಕ್ರಯಪತ್ರ (Sale Deed), ಕನಿಷ್ಠ 30 ವರ್ಷಗಳ ನೋಂದಾಯಿತ ಭೋಗ್ಯ ಪತ್ರ (Lease Deed for not less than 30 years) ಅಥವಾ ದಾನಪತ್ರ (Gift Deed).
4. **ಚಾಲ್ತಿಯಲ್ಲಿರುವ ಕಟ್ಟಡ ಸುರಕ್ಷತಾ ಪ್ರಮಾಣಪತ್ರ (Valid Building Safety Certificate):** ರಾಷ್ಟ್ರೀಯ ಕಟ್ಟಡ ಸಂಹಿತೆ (NBC) ನಿಯಮಗಳನ್ವಯ ಲೋಕೋಪಯೋಗಿ ಇಲಾಖೆ (PWD) ಯಿಂದ ಪಡೆದ ಚಾಲ್ತಿ ಪ್ರಮಾಣಪತ್ರ.
5. **ಚಾಲ್ತಿಯಲ್ಲಿರುವ ಅಗ್ನಿ ಸುರಕ್ಷತಾ ಪ್ರಮಾಣಪತ್ರ (Valid Fire Safety Certificate):** ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಪಡೆದ ಮಾನ್ಯತಾ ಪ್ರಮಾಣಪತ್ರ.
6. **AICTE / NCTE ಅನುಮೋದನೆ ಅಥವಾ ಅರ್ಜಿ ಸಲ್ಲಿಸಿದ ಪ್ರತಿ (AICTE / NCTE Approval or Application Copy):** ಬಿ.ಬಿ.ಎ, ಬಿ.ಸಿ.ಎ, ಬಿ.ಹೆಚ್.ಎಂ, ಎಂ.ಬಿ.ಎ, ಎಂ.ಸಿ.ಎ, ಬಿ.ಎಡ್, ಎಂ.ಎಡ್, ಬಿ.ಪಿ.ಎಡ್ ಮತ್ತು ಎಂ.ಪಿ.ಎಡ್ ಕೋರ್ಸ್‌ಗಳ ಚಾಲ್ತಿ ಅನುಮೋದನಾ ಆದೇಶ ಅಥವಾ 2027-28ನೇ ಸಾಲಿಗೆ ಅರ್ಜಿ ಸಲ್ಲಿಸಿರುವ ಸ್ವೀಕೃತಿ ಪ್ರತಿ.

*4. 2026-27ನೇ ಸಾಲಿನ ಬಾಕಿ ದಾಖಲೆಗಳ ಪಾಲನೆ ಕುರಿತು ಕಡ್ಡಾಯ ಷರತ್ತು:*

**"2026-27ನೇ ಶೈಕ್ಷಣಿಕ ಸಾಲಿನಲ್ಲಿ ಅಗತ್ಯ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ನಂತರ ಸಲ್ಲಿಸುವ ಷರತ್ತಿನ ಮೇಲೆ (Conditional Affiliation) ಸಂಯೋಜನಾ ಆದೇಶ ಪಡೆದ ಕಾಲೇಜುಗಳು/ಸಂಸ್ಥೆಗಳು, ಆ ಬಾಕಿ ಉಳಿಸಿಕೊಂಡಿರುವ ಎಲ್ಲಾ ದಾಖಲೆಗಳನ್ನು ಈ ಮುಖಪುಟ ಪತ್ರದೊಂದಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ, ಅಂತಹ ಕಾಲೇಜುಗಳ 2027-28ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಅರ್ಜಿಯನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ ಹಾಗೂ ತಿರಸ್ಕರಿಸಲಾಗುವುದು."**

*5. ಶುಲ್ಕ ಪಾವತಿ ಕುರಿತು ಅತಿ ಮುಖ್ಯ ಸೂಚನೆ (FEE PAYMENT NOTICE):*

"ಎಲ್ಲಾ ಕಾಲೇಜುಗಳು ಮತ್ತು ಶಿಕ್ಷಣ ಸಂಸ್ಥೆಗಳು ಸಂಯೋಜನಾ ಅರ್ಜಿ ಶುಲ್ಕ ಹಾಗೂ ಸಂಬಂಧಿತ ಎಲ್ಲಾ ಸಂಯೋಜನಾ ಶುಲ್ಕಗಳನ್ನು ಕಡ್ಡಾಯವಾಗಿ UUCMS ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. ಯಾವುದೇ ಕಾರಣಕ್ಕೂ ಆಫ್‌ಲೈನ್ ಪಾವತಿ, ಡಿಮ್ಯಾಂಡ್ ಡ್ರಾಫ್ಟ್ (Demand Draft - DD), ಚೆಕ್ (Cheque), ಚಲನ್ ಅಥವಾ ಇನ್ನಾವುದೇ ಇತರ ವಿಧಾನಗಳ ಮೂಲಕ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ. UUCMS ಪೋರ್ಟಲ್ ಹೊರತುಪಡಿಸಿ ಇತರೆ ಯಾವುದೇ ಮಾರ್ಗದಲ್ಲಿ ಪಾವತಿಸಲಾಗುವ ಮೊತ್ತವನ್ನು ಮಾನ್ಯ ಮಾಡಲಾಗುವುದಿಲ್ಲ."

- ಅರ್ಜಿ ಶುಲ್ಕ: **ರೂ. 6,000/-** (ಪರಿಶಿಷ್ಟ ಜಾತಿ/ಪಂಗಡದ ಆಡಳಿತ ಮಂಡಳಿಗಳಿಗೆ ಸರ್ಕಾರದ ನಿಯಮಾನುಸಾರ ಶೇ. 50 ರಿಯಾಯಿತಿ ಇರುತ್ತದೆ. ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಪ್ರಮಾಣಪತ್ರ ಸಲ್ಲಿಸಬೇಕು).
- ಅಂಚೆ ಅಥವಾ ಕೊರಿಯರ್ ಮೂಲಕ ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತ ದಿನಾಂಕದೊಳಗೆ ಖುದ್ದಾಗಿ ವಿಶ್ವವಿದ್ಯಾಲಯಕ್ಕೆ ತಲುಪಿಸತಕ್ಕದ್ದು.

**ಆದೇಶದ ಮೇರೆಗೆ,**

**ಕುಲಸಚಿವರು**

ಕುಲಸಚಿವರು (ಆ)
ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು - 560 001

**ಪ್ರತಿ:**

1. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಪಿ.ಕೆ. ಬ್ಲಾಕ್, ಬೆಂಗಳೂರು – 560009.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು – 560001.
5. ಕುಲಸಚಿವರು (ಮೌಲ್ಯಮಾಪನ), ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
6. ಹಣಕಾಸು ಅಧಿಕಾರಿಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
7. ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) / ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯದರ್ಶಿಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
8. ವೆಬ್‌ಸೈಟ್ ಉಸ್ತುವಾರಿಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ – ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
9. ಐಟಿ ಸಂಯೋಜಕರು / ಪ್ರೋಗ್ರಾಮರ್, ಯುಯುಸಿಎಂಎಸ್ (UUCMS), ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
10. ಕಚೇರಿ ಪ್ರತಿ / ಶಾಖಾರಕ್ಷಾ ಕಡತ.